ದಿನಾಂಕಃ 25.11.2025 ರಂದು ಕರೆಯಿಸಿ ಪುನಃ ಪ್ರಮಾಣ ವಚನ ಭೋಧಿಸಲಾಯಿತು

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 1 (ಎ ರಿಂದ ಸಿ) ಮತ್ತು 2 ಪರ ವಕೀಲರಾದ ಶ್ರೀ. ಇ ಎನ್ ರವರಿಂದ

ಕಾಗೋಡು ಕೆರಿಯಪ್ಪ ಅಂದರೆ 1 ನೇ ಪ್ರತಿವಾದಿ ನನ್ನ ತಂದೆ ಎಂದರೆ ಸರಿ. ನನ್ನ ತಂದೆಗೆ ನಾನು ಸೇರಿ 4 ಜನ ಮಕ್ಕಳು ಎಂದರೆ ಸರಿ. ನಮ್ಮ ತಾಯಿಯ ಹೆಸರು ಹುಚ್ಚಮ್ಮ. ಈ ದಾವೆಯಲ್ಲಿ ನಮ್ಮ ತಾಯಿಯ ಹೆಸರು ಕೆರಿಯಮ್ಮ ಬರೆದಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಅಕ್ಕಂದಿರು 2 ಜನ ಅವರ ಹೆಸರು ಕೆರಿಯಮ್ಮ ಮತ್ತು ಮಂಜಮ್ಮ ಎಂದರೆ ಸರಿ. ಅವರು ಪ್ರತಿವಾದಿ 1 ಬಿ ಮತ್ತು 1 ಸಿ ಎಂದರೆ ಸರಿ. ಈ ದಾವಾ ಪತ್ರವನ್ನು ನಾನು ಓದಿರುವುದಿಲ್ಲ. ಈ ದಾವೆಯನ್ನು ಯಾವ ಎಲ್ಲಾ ಆಸ್ತಿಗಳಿಗೆ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ–2 ರಲ್ಲಿ ಬರೆದಿರುವ ಕಾಗೋಡು ನಾರಾಯಣಪ್ಪ ನನ್ನ ಅಣ್ಣ ಎಂದರೆ ಸರಿ. ಕಾಗೋಡು ಹುಚ್ಚಪ್ಪ ಎಂದರೆ ನಾನು ಎಂದರೆ ಸರಿ. ನಿಪಿ–2 ರಲ್ಲಿ ನನಗೂ ನನ್ನ ಅಣ್ಣನಿಗೂ ತೋರಿಸಿರುವಂತೆ ವಿಸ್ತೀರ್ಣ ಸರಿಯಿದೆ. ನಿಪಿ–2 ಈ ದಾವಾ ಶೆಡ್ಯೂಲ್ 1 ನೇ ಸ್ವತ್ತಿಗೆ ಸಂಬಂಧಿಸಿದ ದಾಖಲಾತಿ ಎಂದರೆ ಸರಿ. ದಾವಾ ಶೆಡ್ಯೂಲ್ 2 ಕ್ಕೆ ಸ್ವತ್ತಿಗೆ ಸಂಬಂಧಿಸಿದ ದಾಖಲಾತಿ ನಿಪಿ–3 ಎಂದರೆ ಸರಿ. ನಿಪಿ–3 ರಲ್ಲಿ ನನ್ನ ತಂದೆಗೆ 6 ಎಕರೆ 20 ಗುಂಟೆ, ಎರಡನೇ ಪ್ರತಿವಾದಿಗೆ 2 ಎಕರೆ 20 ಗುಂಟೆ ಇದೆ ಎಂದು ನಮೂದು ಇದೆ ಎಂದರೆ ಸರಿ. ದಾವಾ ಶೆಡ್ಯೂಲ್ 3 ನೇ ಸ್ವತ್ತಿಗೆ ಸಂಬಂಧಿಸಿದ ದಾಖಲಾತಿ ನಿಪಿ–4 ಎಂದರೆ ಸರಿ. ಅದರಲ್ಲಿ ಕಾಗೋಡು ಕೆರಿಯಪ್ಪ ತಂದೆ ಹುಚ್ಚನಾಯ್ಕ ಎಂದು ಬರೆದಿರುವುದು ನನ್ನ ತಂದೆ ಎಂದರೆ ಸರಿ.

ನನ್ನ ತಂದೆ ಹೆಬ್ಬೆಟ್ಟು ಹಾಕುತ್ತಿದ್ದರು. 4 ಮತ್ತು 5 ನೇ ಪ್ರತಿವಾದಿಗಳು ನನ್ನ ಮಕ್ಕಳು ಎಂದರೆ ಸರಿ. ಈ ದಾವಾ ಶೆಡ್ಯೂಲ್ 2 ನೇ ಸ್ವತ್ತು 9 ಎಕರೆ ಎಂದು ನಮೂದು ಮಾಡಿದ್ದು, ಅದರಲ್ಲಿ 3 ಎಕರೆ 36 ಗುಂಟೆ ಮಾತ್ರ ನೀವು ಸ್ವಾದೀನದಲ್ಲಿದ್ದು ಉಳಿಕೆ 5 ಎಕರೆ 4 ಗುಂಟೆ ಅಂತಿಮ ಪೋಡಿ ಆದ ಬಳಿಕ ಸಿಗಬಹುದು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಈ ವರೆಗೂ ಸದರಿ ಆಸ್ತಿ ಪೋಡು ಆಗಿರುವುದಿಲ್ಲ ಎಂದರೆ ಸರಿ. ದಾವಾ ಐಟಂ ನಂಬರ್ 2 ರಲ್ಲಿ ನಮೂದು ಮಾಡಿರುವ ಸರ್ವೆ ನಂಬರ್ 29 ರಲ್ಲಿ ಎರಡು ಭಾಗದಲ್ಲಿ ಸ್ವಾದೀನದಲ್ಲಿದೆ ಎಂದರೆ ಸರಿ. ಒಂದು ಭಾಗದಲ್ಲಿ 36 ಗುಂಟೆ ಇನ್ನೊಂದು ಭಾಗದಲ್ಲಿ 3 ಎಕರೆ ಸ್ವಾದೀನದಲ್ಲಿದ್ದೇವೆ ಎಂದರೆ ಸರಿ. ಇದಿಷ್ಟು ವಿಸ್ತೀರ್ಣವು 2 ನೇ ಪ್ರತಿವಾದಿ ಸ್ವಾದೀನದಲ್ಲಿದೆ ಎಂದರೆ ಸರಿ.

ದಾವಾ ಶೆಡ್ಯೂಲ್ ಸ್ವತ್ತುಗಳಲ್ಲೆವೂ ಪಿತ್ರಾರ್ಜಿತವಾಗಿ ಬಂದ ಆಸ್ತಿ ಎಂದೆರ ಸರಿ. ನನ್ನ ತಂದೆ ಜೀವಂತ ಇರುವಾಗ ಎಂ ಆರ್ 10/96-97 ರಂತೆ ರಾಜಸ್ವ ದಾಖಲಾತಿಗಳು ಬದಲಾವಣೆ ಆಗಿವೆ ಎಂದರೆ ಸರಿ. ನನ್ನ ತಂದೆ ಜೀವಂತ ಇದ್ದಾಗ 2000 ನೇ ಇಸವಿಯಲ್ಲಿ ಶೆಡ್ಯೂಲ್ ಸ್ವತ್ತುಗಳ ಬಗ್ಗೆ ಜುಬಾನಿ ಹಿಸ್ಸೆ ಮಾಡಿಕೊಂಡು ಅದರ ನೆನಪಿಗಾಗಿ ದಿಃ01.02.2000 ದಂದು ಹಿಸ್ಸಾ ವಿವರಣ ಪತ್ರವನು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಹಿಸ್ಸಾ ವಿವರಣ ಪತ್ರದ ಪ್ರಕಾರ ದಾವಾ ಸ್ವತ್ತಿನ 2 ನೇ ಐಟಂ ನಂಬರ್ ಅಲ್ಲಿ 15 ಗುಂಟೆ ನನ್ನ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಯಾವುದೇ ಹಿಸ್ಸೆ ಆಗಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಉಳಿದ 8 ಎಕರೆ 25 ಗುಂಟೆಯನ್ನು ನನ್ನ ಅಣ್ಣನ ಹೆಸರಿಗೆ ಕೊಡಲಾಗಿದೆ ಎಂದೆರ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿಯ ಹೆಸರಿನಲ್ಲಿದೆ ಎಂದು ಉತ್ತರಿಸುತ್ತಾರೆ. ಅದರಲ್ಲಿ 1 ಎಕರೆ ನನ್ನ ತಂದೆ ಹಾಗೂ ತಾಯಿ ಅನುಭವಿಸಬೇಕು ಎಂದು ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದವರೆದು ನನ್ನ ತಂದೆ ಬದುಕಿದ್ದಾಗ 1 ಎಕರೆ 38 ಗುಂಟೆ ಮಾತ್ರ ನನ್ನ ಜೀವನಕ್ಕೆ ಕೊಟ್ಟಿರುತ್ತಾರೆ. ನನ್ನ ತಂದೆ ಹಿಸ್ಸೆ ಮಾಡಿ ಕೊಟ್ಟಿದ್ದರೂ ಕೇವಲ ನನ್ನ ಜೀವನಕ್ಕೆ ಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದೆರ ಸರಿಯಲ್ಲ. ನನ್ನ ತಂದೆ 1 ನೇ ಪ್ರತಿವಾದಿ ಹಾಗೂ ನನ್ನ ತಾಯಿ 1 ಎ ಪ್ರತಿವಾದಿ ತೀರಿಕೊಂಡಿದ್ದಾರೆ ಎಂದರೆ ಸರಿ.1 ಮತ್ತು 2 ನೇ ಪ್ರತಿವಾದಿ ತೀರಿಕೊಂಡಿದ್ದರಿಂದ ಸರ್ವೆ ನಂಬರ್ 29 ರಲ್ಲಿ 8 ಎಕರೆ 25 ಗುಂಟೆ 2 ನೇ ಪ್ರತಿವಾದಿಗೆ ಹೋಗಬೇಕು ಎಂದರೆ ಸರಿಯಲ್ಲ. 3 ಎಕರೆ 36 ಗುಂಟಗೆ ಮಾತ್ರ ಸ್ವಾದೀನದಲ್ಲಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು 9 ಎಕರೆ ಕೂಡ ಅಣ್ಣನ ಸ್ವಾದೀನದಲ್ಲಿದೆ ಎಂದು ಉತ್ತರಿಸುತ್ತಾರೆ. ನನ್ನ ಅನುಭವದಲ್ಲಿ 15 ಗುಂಟೆ ಇತ್ತು ಎಂದರೆ ಸರಿಯಲ್ಲ. ಎಂ ಆರ್ 10/96-97 ಇಂದಿಗೂ ಮುಂದುವರೆದಿದೆ ಎಂದರೆ ಸರಿ. ಹಿಸ್ಸೆ ಆಗಿದ್ದರೂ ಮುಂದುವರೆದಿದೆ ಎಂದರೆ ಸಾಕ್ಷಿ ಹಿಸ್ಸೆ ಆಗಿರುವುದಿಲ್ಲ ಎಂದು ಉತ್ತರಿಸುತ್ತಾರೆ. ದಾವಾ ಐಟಂ ನಂಬರ್ 3, 20 ಗುಂಟೆ ಅಡಿಕೆ ತೋಟ ಎಂದರೆ ಸರಿ. ಅದರಲ್ಲಿ 5 ಗುಂಟೆ ನನ್ನ ಹೆಸರಿ ಹಾಗೂ 5 ಗುಂಟೆ ಅಣ್ಣನ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ಕೇವಲ ಸರ್ವೆ ನಂಬರ್ 124/2 ರಲ್ಲಿ 1 ಎಕರೆ 38 ಗುಂಟೆ ಮಾತ್ರ ನನ್ನ ಸ್ವಾದೀನದಲ್ಲಿದೆ ಎಂದು ಉತ್ತರಿಸುತ್ತಾರೆ. ತಂದೆ ತಾಯಿಯ ಮರಣಾ ನಂತರ ನನ್ನ ಅಣ್ಣ ಕೇವಲ 2.5 ಗುಂಟೆ ಇಟ್ಟುಕೊಂಡು 7.5 ಗುಂಟೆ ನನಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 3 ರಲ್ಲಿ 2 ನೇ ಪ್ರತಿವಾದಿಗೆ 7.5 ಗುಂಟೆ ಹಾಗೂ ನನಗೆ 12.5 ಗುಂಟೆ ಬಂದಿರುತ್ತದೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 1 ರ ಸಂಪೂರ್ಣ ಸ್ವತ್ತಿನಲ್ಲಿ ನಾನೇ ಸ್ವಾದೀನದಲ್ಲಿದೆನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1 ಎಕರೆ 38 ಗುಂಟೆ ಮಾತ್ರ

ನನ್ನ ಸ್ವಾಧೀನದಲ್ಲಿದೆ ಎಂದು ಉತ್ತರಿಸುತ್ತಾರೆ. ಅದೇ ಸರ್ವೆ ನಂಬರ್ ಅಲ್ಲಿ ಮನೆ ಇದೆ ಎಂದರೆ ಸರಿ. ಸದರಿ ಮನೆಯಲ್ಲಿ ನಾನು, ನನ್ನ ಹೆಂಡತಿ ನೇತ್ರಾವತಿ ಮತ್ತು 4 ಮತ್ತು 5 ನೇ ಪ್ರತಿವಾದಿಗಳು ಮಾತ್ರ ಇರುತ್ತೇವೆ ಎಂದರೆ ಸರಿ. ನಾನು ಮತ್ತು 2 ನೇ ಪ್ರತಿವಾದಿ ಬೇರೆ ಬೇರೆ ಮನೆಯಲ್ಲಿ ವಾಸವಾಗಿದ್ದೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪಾಲು ಆಗಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ಮಕ್ಕಳಾದ 4 ಮತ್ತು 5 ನೇ ಪ್ರತಿವಾದಿಯ ವಿದ್ಯಾಭ್ಯಾಸ , ಲಾಲನೆ ಪಾಲನೆ ನಾನೇ ಮಾಡುತ್ತೇನೆ ಎಂದರೆ ಸರಿ.

2 ನೇ ಪ್ರತಿವಾದಿ ಕುಗ್ವೆ ಗ್ರಾಮದ ಸರ್ಕಾರಿ ಜಾಗದಲ್ಲಿ ಆರ್ ಸಿ ಸಿ ಮನೆಯನ್ನು ಕಟ್ಟಿ ಅವರ ಸಂಸಾರ ಸಮೇತ ವಾಸವಾಗಿದ್ದಾರೆ ಎಂದರೆ ಸರಿ. ಅವರು ಮತ್ತು ನಾನು ಬೇರೆ ಬೇರೆ ವಾಸ ಮಾಡುತ್ತಾ ಎಷ್ಟು ವರ್ಷಗಳಾಯಿತು ಎಂದೆರ ಸಾಕ್ಷಿ ನನ್ನ ತಂದೆ ತಾಯಿ ಬದುಕಿದ್ದಾಗಲೇ ನಾನು ಮತ್ತು ನನ್ನ ಅಣ್ಣ ಬೇರೆ ಬೇರೆ ವಾಸವಾಗಿರುತ್ತೇವೆ. ಸಾಕ್ಷಿ ಮುಂದುವೆರದು ವ್ಯವಹಾರ ಒಂದೇ ಎಂದು ಉತ್ತರಿಸುತ್ತಾರೆ. ನನ್ನ ತಂದೆ ದಿಃ15.09.2003 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ನನ್ನ ತಂದೆ ಜೀವಂತ ಇದ್ದಾಗ ಹಿಸ್ಸೆ ಕಾಲದಲ್ಲಿ ನನ್ನ ಅಕ್ಕಂದಿರು ಆತ್ಮಸಂತೋಷದಿಂದ ನಮಗೆ ಭಾಗ ಬೇಡ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿ ನನಗೆ ಆ ವಿಚಾರ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಹಾಗೆ ಹೇಳಿದ್ದರಿಂದ ನಮ್ಮ ಅಕ್ಕ ತಂಗಿಯರನ್ನು ಬಿಟ್ಟು ನಾನು ಮತ್ತು 2 ನೇ ಪ್ರತಿವಾದಿ ಹಿಸ್ಸೆ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ